ಕೇಳಿರುವಂಥ ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು ಮಂತ್ರಿಗಳು ಅಪ್ರೂವ್ ಮಾಡಿದಾಗ ಅದನ್ನು ಮಂತ್ರಿಗಳ ಕಾರ್ಯಾಲಯದ ಸಿಬ್ಬಂದಿ ವರ್ಗದವರು ಸಂಬಂಧಪಟ್ಟ ಸಚಿವಾಲಯದ ಅಧೀನ ಕಾರ್ಯದರ್ಶಿ, ಉಪ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡುತ್ತಾರೆ. ಅಲ್ಲಿಗೆ ಅವರ ಕೆಲಸ ಮುಗಿದು ಹೋಯಿತು. ಆದರೆ ಮಾನ್ಯ ಸದಸ್ಯರು ಹೇಳುತ್ತಿರುವಂತೆ ಅವರನ್ನು ಸಸ್ಪೆಂಡ್ ಮಾಡಿರೆಂದರೆ ಆ ಅಧಿಕಾರ ನಮಗಿಲ್ಲ, ಬದಲಿಗೆ ಡಿ.ಪಿ.ಎ.ಆರ್.ಗೆ ಇರುತ್ತದೆ. ಮಾನ್ಯ ಶಂಕರಲಿಂಗೇಗೌಡರೇ, ತಾವು ಹೀಗಾದರೆ ಹೇಗೆ? ನಾವು ಸುಮ್ಮನೆ ಕುಣಿದಾಡಿದರೆ ಏನು ಭಾಗ್ಯ ಬರುತ್ತದೆ? ಎಲ್ಲಾದಕ್ಕೂ ಒಂದು ಕ್ರಮವಿದೆ. ಒಂದು ಹಂತದಲ್ಲಿ ಏನೋ ಆಗಿ ಉತ್ತರ ತಡವಾಗಿ ಬಂದರೆ ತಮ್ಮ ಆದೇಶಕ್ಕನುಗುಣವಾಗಿ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ಪತ್ರ ಬರೆದರೆ, ಫೋನ್ ಮಾಡಿದರೆ ಹೇಳುತ್ತಾರೆ. ಉತ್ತರ ಬರಲಿಲ್ಲವೆಂದರೆ we may tone up the whole administration. ಸಸ್ಪೆಂಡ್ ಮಾಡುವುದಕ್ಕೆ ನಮಗ್ಯಾರಿಗೂ ಅಧಿಕಾರವಿಲ್ಲ. ತಾವು ಮಂತ್ರಿಗಳಾದಲ್ಲಿ ಹೇಗೆ ಸಿಕ್ಕಿಹಾಕಿಕೊಂಡಿದ್ದೇನೆಂದು ತಮಗೆ ಗೊತ್ತಾಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ಶ್ರೀ ಕೆ.ಹೆಚ್. ರಂಗನಾಥ್ : ತಮ್ಮಂಥವರೇ!

ಒಬ್ಬ ಮಾನ್ಯ ಸದಸ್ಯರು : ಉತ್ತರ ಒದಗಿಸುವ ಕೆಲಸ ಮಾಡಲಿ. ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳುವುದಿಲ್ಲ.

ಶ್ರೀ ಸಿ. ಭೈರೇಗೌಡ : ಸದನದ ನಿಯಮಾವಳಿಯಲ್ಲಿ ಇದರ ಬಗ್ಗೆ ಸ್ಪಷ್ಟವಾಗಿದೆ. ನಿಯಮಾವಳಿ ರೀತ್ಯ ಯಾರೇ ಆಗಲಿ ಈ ಸದನಕ್ಕೆ ಒದಗಿಸತಕ್ಕಂಥ ಮಾಹಿತಿಯನ್ನು ತಡೆಹಿಡಿಯುವ ಹಾಗಿಲ್ಲ. ಉತ್ತರಕ್ಕೆ ಮಾನ್ಯ ಮಂತ್ರಿಗಳು ರುಜು ಮಾಡಿದ್ದರೂ ಅಧಿಕಾರಿಗಳು ತಡೆ ಹಿಡಿದ್ದಾರೆಂದು ತಾವೇ ಹೇಳುತ್ತಿದ್ದೀರಿ.

ಅಧ್ಯಕ್ಷರು : ತಡೆ ಹಿಡಿದಿಲ್ಲ, ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಿಲ್ಲವೆಂದು ಹೇಳುತ್ತಿದ್ದೇನೆ.

SRI C. BYREGOWDA : I stand corrected. This amounts to withholding the information from this House. So, it is contempt of the House. You have to give your considered ruling on this.

MR. SPEAKER : I will give a ruling.

ಕೋಲಾರ ಜಿಲ್ಲೆಯಲ್ಲಿ ಬೋರ್‌ವೆಲ್ ಬಾವಿಗಳನ್ನು ಕೊರೆಯುವುದು

108 - ಶ್ರೀ ಶ್ರೀನಿವಾಸ ಗೌಡ ಕುದುವನಹಳ್ಳಿ (ಕೋಲಾರ) : ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಸರ್ಕಾರ ಅಧಿಕಾರ ವಹಿಸಿಕೊಂಡಾಗಿನಿಂದ ಕೋಲಾರ ಜಿಲ್ಲೆಯಲ್ಲಿ ಒಟ್ಟಾರೆ ಎಷ್ಟು ಬೋರ್‌ವೆಲ್ ಕೊರೆಯಲಾಗಿದೆ?

ಅ) ಅದರಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಎಷ್ಟು ಬೋರ್‌ವೆಲ್ ಕೊರೆಯಲಾಗಿದೆ?

ಇ) ಎಷ್ಟು ಬೋರ್‌ವೆಲ್ ನೀರು ಬಂದಿದೆ ಮತ್ತು ಎಷ್ಟು ಬೋರ್‌ಗಳು ವಿಫಲಗೊಂಡಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 292 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಆ) ತಾಲ್ಲೂಕುವಾರು ಕೊರೆದಿರುವ ಕೊಳವೆಬಾವಿಗಳ ವಿವರಗಳನ್ನು ಅನುಬಂಧ 1ರಲ್ಲಿ ಒದಗಿಸಿದೆ.

ಇ) 239 ಕೊಳವೆಬಾವಿಗಳು ಸಫಲವಾಗಿದ್ದು. 53 ಕೊಳವೆಬಾವಿಗಳು ವಿಫಲಗೊಂಡಿದೆ.

ಅನುಬಂಧ - 1

ಕೋಲಾರ ಜಿಲ್ಲೆಯಲ್ಲಿ ಕೊರೆದಿರುವ ಕೊಳವೆಬಾವಿಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಕೊರೆದಿರುವ ಕೊಳವೆಬಾವಿಗಳು		
		ಒಟ್ಟು	ಸಫಲ	ವಿಫಲ
1.	ಕೋಲಾರ	14	13	1
2.	ಮಾಲೂರು	12	10	2
3.	ಬಂಗಾರಪೇಟೆ	13	9	4
4.	ಮುಳಬಾಗಿಲು	16	15	1
5.	ಶ್ರೀನಿವಾಸಪುರ	20	16	4
6.	ಚಿಕ್ಕಬಳ್ಳಾಪುರ	47	37	10
7.	ಚಿಂತಾಮಣಿ	44	38	6
8.	ಗುಡಿಬಂಡೆ	18	14	4
9.	ಗೌರಿಬಿದನೂರು	35	32	3
10.	ಬಾಗೇಪಲ್ಲಿ	27	17	10
11.	ಶಿಡ್ಲಘಟ್ಟ	46	38	8
	ಒಟ್ಟು	**292**	**239**	**53**

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ ಈ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದ ನಂತರ ಕೋಲಾರ ಜಿಲ್ಲೆಯಲ್ಲಿ ಒಟ್ಟು 292 ಕೊಳವೆ ಬಾವಿಗಳನ್ನು ಕೊರೆಸಿದ್ದು ಅದರಲ್ಲಿ 53 ವಿಫಲಗೊಂಡಿವೆ. ತಮಗೆ ಗೊತ್ತಿರುವಂತೆ ಮೊನ್ನೆ ದಿವಸ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಹಣವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಕೇಳಿದಾಗ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆಯೆಂದು ಈ ಕುರಿತು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಎಂದು ಹೇಳಿದರು. ನಾನು ಜಿಲ್ಲಾಧಿಕಾರಿಯವರನ್ನು ಕೇಳಿದಾಗ ಕೇವಲ 69 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆಯೆಂದು ತಿಳಿಸಿದರು. ಮಾನ್ಯ ಅಧ್ಯಕ್ಷರೆ, ನಿಮ್ಮ ತಾಲ್ಲೂಕಿನಲ್ಲೂ ಕೂಡ ಕೇವಲ 16 ಬೋರ್‌ವೆಲ್‌ಗಳನ್ನು ಕೊರೆದಿದ್ದು, ಕೋಲಾರ ತಾಲ್ಲೂಕಿನ ವೇಮಗಲ್ ಮತ್ತು ಕೋಲಾರ ಕ್ಷೇತ್ರಗಳಲ್ಲಿ 14 ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನೀವು ಕುಡಿಯುವ ನೀರಿಗೆ ಆದ್ಯತೆ ಕೊಟ್ಟಿಲ್ಲ. ಇದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಹೇಳಿದ್ದೇನೆ. ನನಗೆ ಕಂದಾಯ ಸಚಿವರಾದ ಮಾನ್ಯ ಶ್ರೀಕಂಠಯ್ಯನವರ ಮೇಲೆ, ನಾನು ಹುಡುವ ಆಗಿದ್ದಾಗಿನಿಂದಲೂ ಬಹಳ ವಿಶ್ವಾಸವಿದೆ. ಏಕೆಂದರೆ ಯಾವುದನ್ನೇ ಕೇಳಲಿ, ಅವರು ಇಲ್ಲವೆಂದು ಹೇಳುವುದಿಲ್ಲ. ಚನ್ನರಾಯಪಟ್ಟಣದಲ್ಲಿ ಒಂದು ಕಥೆ ಹೇಳುತ್ತಾರೆ. ಏನೆಂದರೆ ಅಲ್ಲಿ ಹೋಗಿ 'ಈ ಬಿಲ್ಡಿಂಗ್ ಯಾರು ಕಟ್ಟಿಸಿದ್ದು? ಎಂದರೆ 'ನಾನೇ' ಎಂದು, 'ರಸ್ತೆ ಯಾರು ಮಾಡಿಸಿದ್ದು?' ಎಂದರೆ 'ನಾನೇ ಮಾಡಿಸಿದ್ದು' ಎಂದು ಕೊನೆಗೆ 'ಸರ್, ಈ ಹುಡುಗಿ ಗರ್ಭಿಣಿಯಾಗಿದ್ದಾಳೆ' ಎಂದರೆ 'ಅದನ್ನೂ ನಾನೇ ಮಾಡಿದ್ದು' ಎನ್ನುತ್ತಾರೆ!

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಇವರು ಎಲ್ಲವನ್ನೂ ಹಾಳು ಮಾಡಿ ಹಂಚಿಹೋದವರು. ಕೆಲಸ ಮಾಡಿಸಿರುವ ಎಲ್ಲಾ ಕತೆಯೂ ಈಗ ಮುಗಿದುಹೋಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಹಾಸನದ ತಂಟೆಗೆ ಏಕೆ ಹೋಗುತ್ತೀರಿ? ಹೋಗಬೇಡಿ. ಕೋಲಾರದ ವಿಷಯವನ್ನು ಹೇಳಿ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಅದು ನಿಜ. ಮಾನ್ಯ ಅಧ್ಯಕ್ಷರೆ, ನಾನು ವಿಷಯಕ್ಕೆ ಬರುತ್ತೇನೆ. ವಿಫಲಗೊಂಡಿರುವ 53 ಕೊಳವೆಬಾವಿಗಳನ್ನು ಗಮನಿಸಿದರೆ ಇವೊತ್ತು ಕೋಲಾರ ಜಿಲ್ಲೆಯಲ್ಲಿ ಆರನೇ ಒಂದು ಭಾಗದಷ್ಟು ಕೊಳವೆ ಬಾವಿಗಳು ವಿಫಲವಾಗಿದೆ. ಇದರ ಬಗ್ಗೆ ತಾವು ಎಚ್ಚರವಹಿಸಿ ನೀರನ್ನು ರೀ-ಚಾರ್ಜ್ ಮಾಡುವುದಕ್ಕೆ ಜಿಲ್ಲೆಯಲ್ಲಿ ಏನು ಕ್ರಮ ಕೈಗೊಂಡಿದ್ದೀರಿ? ಇವೊತ್ತು ಹಳ್ಳಿ ಮತ್ತು ಪಟ್ಟಣಗಳಲ್ಲಿ ಕೂಡ ನಮಗೆ ಕೊಳವೆ ಬಾವಿ ಸೌಕರ್ಯ ಒದಗಿಸಿಕೊಡಬೇಕೆನ್ನುವಂಥ ಒತ್ತಡಗಳು ಜಾಸ್ತಿಯಾಗಿರುವುದರಿಂದ, ಕುಡಿಯುವ ನೀರಿನ ಸೌಲಭ್ಯ ಒದಗಿಸುವುದಕ್ಕೆ ಕೇವಲ 69 ಲಕ್ಷ ರೂಪಾಯಿಗಳಷ್ಟು ಹಣ ಒದಗಿಸಿದರೆ ಸಾಲದು, ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಬಿಡುಗಡೆ ಮಾಡುವಂಥ ಕೆಲಸ ಮಾಡಿದ್ದೀರಾ? ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಸರ್ಕಾರ ಅಧಿಕಾರಕ್ಕೆ ಬಂದನಂತರ ಕೋಲಾರ ಜಿಲ್ಲೆಯಲ್ಲಿ 292 ಕೊಳವೆ ಬಾವಿಗಳನ್ನು ಕೊರೆದಿದ್ದು, ಆ ಪೈಕಿ 234 ಬೋರ್‌ವೆಲ್‌ಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳಡಿ ಬರುತ್ತದೆ, ಇನ್ನು 58 ಕೊಳವೆ ಬಾವಿಗಳನ್ನು ಸ್ಕೇರ್‌ಸಿಟಿ ರಿಲೀಫ್‌ನಲ್ಲಿ ತೆಗೆದುಕೊಂಡಿದ್ದೇವೆ. ಪ್ರಸಕ್ತ ವರ್ಷ ಕೋಲಾರ ಜಿಲ್ಲೆಯಲ್ಲಿ ಒಟ್ಟು 431 ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅದರಲ್ಲಿ 108 ಕೊಳವೆಬಾವಿಗಳನ್ನು ಡಿಪಾರ್ಟ್‌ಮೆಂಟ್ ಆಫ್ ರಿಗ್ಸ್‌ನಿಂದ ಕೊರೆಯಲಾಗಿದ್ದು, 323 ಕೊಳವೆ ಬಾವಿಗಳನ್ನು ಖಾಸಗಿ ಡ್ರಿಲಿಂಗ್ ಕಂಪನಿಯವರಿಂದ ಕೊರೆಸಲಾಗಿರುತ್ತದೆ. ಕೋಲಾರ ಜಿಲ್ಲಾ ಪಂಚಾಯತ್‌ಗೆ ಈಗಾಗಲೇ ಮೂರು ಡ್ರಿಲಿಂಗ್ ರಿಗ್ಸ್ ಕೊಟ್ಟಿದ್ದು, ಈ ಪೈಕಿ ಒಂದು ಫ್ಲಶಿಂಗ್ ರಿಗ್ ಅವರ ಬಳಿ ಇದೆ. One more rig is being transferred. ಇನ್ನು ಕುಡಿಯುವ ನೀರಿನ ವಿಚಾರವಾಗಿ ಹೇಳುವುದಾದರೆ, ಈ ವರ್ಷ ಕೋಲಾರ ಜಿಲ್ಲೆಯಲ್ಲಿ 59 ಪೈಪ್ಡ್ ವಾಟರ್ ಸ್ಕೀಮ್ ಪೂರ್ಣಗೊಂಡಿದೆ ಮತ್ತು 138 ಮಿನಿ ವಾಟರ್ ಸ್ಕೀಮ್ಸ್ ಪೂರ್ತಿಗೊಂಡಿದೆ. 224 ಕೊಳವೆ ಬಾವಿಗಳನ್ನು ಕೊರೆಯುವುದಕ್ಕಾಗಿ ಸ್ಟೇಟ್ ಪ್ಲಾನ್‌ನಿಂದ 3 ಕೋಟಿ 26 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದ್ದರೆ, ಸೆಂಟ್ರಲ್ ಪ್ಲಾನ್‌ನಿಂದ 3 ಕೋಟಿ 68 ಲಕ್ಷ ರೂಪಾಯಿಗಳು ಅಂದರೆ ಒಟ್ಟು 6-7 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ. ಅಷ್ಟೇ ಅಲ್ಲದೆ, expenditure in regard to State and Central plan by the end of 2000. ಸೆಂಟ್ರಲ್ ಮತ್ತು ಸ್ಟೇಟ್ ಸ್ಕೀಮ್‌ನಲ್ಲಿ ಆರು ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಹಣ ಬಿಡುಗಡೆಯಾಗಿರುವುದಲ್ಲದೆ ಖರ್ಚು ಸಹ ಆಗಿದೆ. ಜೊತೆಗೆ ಸಾಧನೆ ಎಷ್ಟಾಗಿದೆ ಎಂತಲೂ ಹೇಳಿದ್ದೇನೆ. ಕೊಳವೆ ಬಾವಿಗಳು ವಿಫಲವಾಗಿವೆ ಎಂದ ತಕ್ಷಣ ಅದಕ್ಕೊಂದು ಅರ್ಥವಿದೆ. ವಿಫಲವೆಂದರೆ, ಹ್ಯಾಂಡ್ ಪಂಪ್ ವಿಷಯದಲ್ಲಿ ಹೇಳುವುದಾದರೆ ಗಂಟೆಗೆ 500 ಜಿಪಿಹೆಚ್‌ಗಿಂತಲೂ ಕಡಿಮೆ ಬಂದರೆ ಅದನ್ನು 'ವಿಫಲ'ವೆಂದು ಬರೆಯಬೇಕಾಗುತ್ತದೆ. ಅದೇ ರೀತಿ ಪೈಪ್ಡ್ ವಾಟರ್‌ನಲ್ಲಿ ಗಂಟೆಗೆ 2000 ಜಿಪಿಹೆಚ್‌ಗಿಂತಲೂ ಕಡಿಮೆ ಬಂದರೆ ಅದನ್ನು 'ವಿಫಲ ಬಾವಿ' ಎಂದು ಬರೆಯಬೇಕಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಇರತಕ್ಕಂತಹ ಪರಿಸ್ಥಿತಿ ಏನಿದೆಯೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅದಕ್ಕಾಗಿ ನಾವು ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇಷ್ಟು ರಿಗ್‌ಗಳನ್ನು ಹಾಕಿಯೂ ವಾಟರ್ ಸೋರ್ಸ್ ಸಿಗುವುದಿದ್ದರೆ ಮತ್ತು ಎಲ್ಲಿಯಾದರೂ ಸೋರ್ಸ್ ಸಿಗುತ್ತದೆಂದು ಕಂಡುಬಂದರೆ ಖಂಡಿತವಾಗಿಯೂ ಅಲ್ಲಿ ನೀರಿನ ಸೌಕರ್ಯ ಒದಗಿಸಿಕೊಡುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮದೇ ಆದ ವ್ಯವಸ್ಥೆಯಲ್ಲಿ ವೆಲ್ ಬೋರಿಂಗ್ ಡಿವಿಜನ್ ಎಂದು ಇದೆ. ಅದರ ಮೂಲಕ ಕೆಲವು ರಿಗ್‌ಗಳನ್ನು ತಾವು ಮೈನ್‌ಟೇನ್ ಮಾಡುತ್ತಿದ್ದೀರಿ. ಆ ರಿಗ್‌ಗಳಿಗೆ ತಿಂಗಳಾನುಗಟ್ಟಲೆ ಡೀಸೆಲನ್ನು ಸರಬರಾಜು ಮಾಡದೆ ಅವುಗಳು ಅಲ್ಲಿನ ಟಿ.ಬಿ. ಹತ್ತಿರ ನಿಂತಿದ್ದು ನಿಜವೆ? ಇದು ನನ್ನ ಗಮನಕ್ಕೆ ಬಂದಿದೆ, ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಾವು ಅವರಿಗೆ ಡೀಸೆಲನ್ನು ಸರಬರಾಜು ಮಾಡಿರಲಿಲ್ಲ. ಆದ್ದರಿಂದ ಅವರು

ಖಾಸಗಿ ರಿಗ್‌ಗಳನ್ನು ಬಳಸಬೇಕಾದ ಅಗತ್ಯತೆ ಬಂತು. ಅದರ ಜೊತೆಗೆ ಚಿಕ್ಕಬಳ್ಳಾಪುರ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕೊರೆದ ಬಾವಿಗಳ ವಿಫಲತೆಯು 25 ಪರ್‌ಸೆಂಟ್‌ಗಿಂತ ಜಾಸ್ತಿ ಇದೆ. ಇಂದು ವೈಜ್ಞಾನಿಕವಾಗಿ ಬಹಳ ಅಭಿವೃದ್ಧಿಯನ್ನು ಹೊಂದಿರುವ ಸಮಯದಲ್ಲಿ ವೈಜ್ಞಾನಿಕವಾಗಿ ನೀರಿನ ಲಭ್ಯತೆಯ ಪಾಯಿಂಟನ್ನು ಕಂಡು ಹಿಡಿದು ಅಲ್ಲಿ ಕೊಳವೆ ಬಾವಿಯನ್ನು ತೋಡಿದರೆ ಸರ್ಕಾರಕ್ಕೆ ಕಡಿಮೆ ಖರ್ಚಾಗುತ್ತದೆ. ಇದರ ಬಗ್ಗೆ ತಾವು ಗಮನ ಹರಿಸಬೇಕು. ಇದು ಕೇವಲ ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. ಇದರ ಬಗ್ಗೆ ತಾವು ಖುದ್ದಾಗಿ ಪರಿಶೀಲನೆ ಮಾಡಬೇಕು. ಎರಡನೆಯದಾಗಿ, ಒಂದು ಕೊಳವೆ ಬಾವಿಯಲ್ಲಿ ನೀರು ಬಾರದೆ ವಿಫಲವಾದಾಗ ಆ ಬಾವಿಯಲ್ಲಿ ಹಾಕಿರುವ ಕೇಸಿಂಗ್ ಪೈಪನ್ನು ತೆಗೆಯದೆ ಹಾಗೆಯೇ ಬಿಟ್ಟುಬಿಡುತ್ತಾರೆ. ಅದಕ್ಕೆಲ್ಲ ಬಿಲ್ಲನ್ನು ಮಾಡಿ ಪೇಮೆಂಟ್ ಮಾಡುತ್ತಾರೆ. ಇವೆಲ್ಲ ಅನಾವಶ್ಯಕವಾದ ಖರ್ಚನ್ನು ಸರ್ಕಾರ ಬರಿಸುತ್ತದೆ. ಆದ್ದರಿಂದ ವಿಫಲವಾದ ಬಾವಿಗಳಿಗೇನು ಕೇಸಿಂಗ್ ಪೈಪನ್ನು ಹಾಕಿರುತ್ತಾರೆ ಅದನ್ನು ತೆಗೆಸುವ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡಿದ್ದೇ ಆದರೆ ಕೋಟಿಗಟ್ಟಲೆ ಹಣದ ಉಳಿತಾಯ ಸರ್ಕಾರಕ್ಕೆ ಆಗುತ್ತದೆ. ಆದ್ದರಿಂದ ತಾವು ದಯಮಾಡಿ ನನ್ನ ಈ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗಿ ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಅಂತರ್ಜಲದ ಮಟ್ಟ ಬಹಳ ಕೆಳಕ್ಕೆ ಹೋಗಿದೆ. ಎಷ್ಟು ಕೊರೆದರೂ ಬಾವಿಗಳಲ್ಲಿ ಸಾಕಷ್ಟು ನೀರು ಸಿಗುವುದು ಕಷ್ಟವಾಗಿದೆ. ನನಗೆ ತಿಳಿದಂತೆ ಇದಕ್ಕೆ ಒಂದೇ ಒಂದು ಪರಿಹಾರ ಇದೆ. ಅದೇನೆಂದರೆ ಅಂಡರ್ ಗ್ರೌಂಡ್ ವಾಟರ್ ರಿಸೋರ್ಸನ್ನು ಕಾಪಾಡಲು ನಾವು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನು ತೆಗೆದುಕೊಳ್ಳಬೇಕು. ಸುದೈವದಿಂದ ಕೆರೆಗಳ ಹೂಳನ್ನು ತೆಗೆಯುವ ಕಾರ್ಯಕ್ರಮಕ್ಕೆ ಈ ವರ್ಷದ ಬಜೆಟ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿ ಕೊಟ್ಟಿದ್ದಾರೆ. ಕೆರೆಗಳ ಹೂಳನ್ನು ತೆಗೆದರೆ ಅಂತರ್ಜಲದ ಮಟ್ಟ ಸಾಕಷ್ಟು ಜಾಸ್ತಿಯಾಗುತ್ತದೆ ಎಂಬ ವಿಶ್ವಾಸ ನನಗೆ ಇದೆ. ಇಲ್ಲದಿದ್ದರೆ ಅಂತರ್ಜಲದ ಮಟ್ಟ ಜಾಸ್ತಿಯಾಗುವುದು ಕಷ್ಟ. ಬೇರೆ ಕಡೆ ನೀರು ಸಿಗುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಎಲ್ಲೆಲ್ಲಿ ಕೆರೆಗಳಿದೆಯೋ ಅಲ್ಲಿ ಹೂಳನ್ನು ತೆಗೆಯುವ ಕೆಲಸ ಮಾಡಬೇಕು. ಮತ್ತು ಬೇರೆ ಬೇರೆ ಕಾರ್ಯಕ್ರಮದ ಅಡಿಯಲ್ಲಿ ಎಲ್ಲೆಲ್ಲಿ ನೀರನ್ನು ನಿಲ್ಲಿಸಲು ಸಾಧ್ಯವೋ ಆ ಕೆಲಸವನ್ನು ಮಾಡಿದರೆ ಮಾತ್ರ ಈ ಅಂತರ್ಜಲದ ಮಟ್ಟವನ್ನು ಕಾಪಾಡಿಕೊಂಡು ಬರಲು ಸಾಧ್ಯವಾಗುತ್ತದೆ. ಆ ಕೆಲಸವನ್ನು ಮಾಡಲು ಈ ವರ್ಷದಲ್ಲಿ ಸಾಕಷ್ಟು ಅವಕಾಶವಿದೆ ಎಂದು ನಂಬಿದ್ದೇನೆ. ಮಾನ್ಯ ಸದಸ್ಯರು ಅದರ ಕಡೆಗೆ ಗಮನಕೊಟ್ಟರೆ ಸರ್ಕಾರ ಸಂಪೂರ್ಣವಾದ ಸಹಕಾರವನ್ನು ಕೊಡುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಬೋರ್‌ವೆಲ್‌ಗಳ ಫೈಲ್ಯೂರ್‌ನ ಪ್ರಮಾಣ ಜಾಸ್ತಿ ಇದೆ. ಎಲ್ಲಿ ನೀರು ಸಿಗುತ್ತದೆ ಎಂಬುದನ್ನು ಪತ್ತೆ ಮಾಡಲು ಆಧುನಿಕ ಸಾಮಗ್ರಿಗಳು ಇದೆ. ಆದ್ದರಿಂದ ಅತ್ಯಂತ ಆಧುನೀಕೃತವಾದ ಸಾಮಗ್ರಿಗಳನ್ನು ತಂದು ಅದರ ಮೂಲಕ ಎಲ್ಲಿ ನೀರಿನ ಲಭ್ಯತೆ ಇದೆ ಎಂಬುದನ್ನು ಪತ್ತೆ ಮಾಡಿ ಅಂಥ ಕಡೆ ಬೋರ್ ವೆಲನ್ನು ತೋಡಿದರೆ

ಬೋರ್‌ವೆಲ್‌ಗಳ ವಿಫಲತೆಯ ಪ್ರಮಾಣ ಕಡಿಮೆಯಾಗುತ್ತದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ತೋಡಿರುವ 42 ಬಾವಿಗಳಲ್ಲಿ 10ರಲ್ಲಿ ವಿಫಲವಾಗಿದೆ, ಬಾಗೇಪಲ್ಲಿಯಲ್ಲಿ ತೋಡಿರುವ 27 ಬಾವಿಗಳಲ್ಲಿ 10ರಲ್ಲಿ ವಿಫಲವಾಗಿದೆ. ಈ ರೀತಿ ವಿಫಲವಾಗುತ್ತಿರುವ ಬಾವಿಗಳ ಸಂಖ್ಯೆ ಅತ್ಯಂತ ಹೆಚ್ಚಾಗಿದೆ. ಸರ್ಕಾರಕ್ಕೆ ಕಡಿಮೆ ಹಣವು ಖರ್ಚಾಗಬೇಕಿದ್ದರೆ ಸಫೆಸ್ಟಿಕೇಟೆಡ್ ಸಾಮಗ್ರಿಯನ್ನು ಉಪಯೋಗ ಮಾಡಿ ಬೋರ್‌ವೆಲ್‌ಗಳನ್ನು ತೋಡುವ ಸ್ಥಳವನ್ನು ಪತ್ತೆ ಮಾಡಬೇಕು. ವಿಫಲವಾದ ಬಾವಿಗಳಲ್ಲಿ ಕೇಸಿಂಗ್ ಪೈಪನ್ನು ತೆಗೆಯದೆ ಹಾಗೆಯೇ ಬಿಟ್ಟುಬಿಡುತ್ತಾರೆ. ಆದ್ದರಿಂದ ಕೇಸಿಂಗ್ ಪೈಪನ್ನು ವಿಫಲವಾದ ಬಾವಿಗಳಿಂದ ತೆಗೆಸಿಬಿಟ್ಟರೆ ಅದಕ್ಕೆ ಪೇಮೆಂಟ್ ಮಾಡುವ ಪ್ರಸಂಗ ಬರುವುದಿಲ್ಲ. ಬಾವಿಗಳನ್ನು ಕೊರೆಯಲು ರಿಗ್‌ಗಳನ್ನೇನೋ ಕೊಟ್ಟಿದ್ದೀರಿ. ಆದರೆ ಅದು ಹಲವಾರು ತಿಂಗಳುಗಳಿಂದ ನಿಂತಲ್ಲಿಯೇ ನಿಂತಿದೆ. ಏಕೆ ಎಂದು ಕೇಳಿದರೆ ಡೀಸೆಲ್ ಸರಬರಾಜು ಮಾಡಿಲ್ಲವೆಂದು ಹೇಳಿರುವುದು ನನ್ನ ಗಮನಕ್ಕೆ ಬಂದಿದೆ. ಈ ಮೂರು ವಿಚಾರದ ಬಗ್ಗೆ ದಯಮಾಡಿ ಉತ್ತರವನ್ನು ಕೊಡಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಕೇಸಿಂಗ್ ಪೈಪನ್ನು ವಿಫಲವಾದ ಬಾವಿಗಳಿಂದ ತೆಗೆಯಲೇಬೇಕು. ಅದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಆ ಕೆಲಸವನ್ನು ಮಾಡದಿದ್ದರೆ ಅದನ್ನು ಮಾಡುವುದಕ್ಕೆ ಅಧಿಕಾರಿಗಳಿಗೆ ನಾನು ಸೂಚನೆ ಕೊಡುತ್ತೇನೆ. ನೀರಿನ ಲಭ್ಯತೆಯನ್ನು ಪತ್ತೆ ಮಾಡಲು ಆಧುನಿಕ ಯಂತ್ರವನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಬೇಕೋ ಅಷ್ಟರಮಟ್ಟಿಗೆ ಉಪಯೋಗ ಮಾಡಿಯೇ ಈ ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಸಿ. ಬೈರೇಗೌಡ : ತಮ್ಮ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ತಮ್ಮ ಜಿಯಾಲಜಿಸ್ಟ್‌ಗಳು ಜೀಪ್‌ನಲ್ಲಿ ಒಂದು ಕಂಪಾಸನ್ನು ಇಟ್ಟುಕೊಂಡಿರುತ್ತಾರೆ. ಅವರು ಮಾಡುವ ಕೆಲಸವನ್ನು ಜೀಪ್ ಸರ್ವೆ ಎಂದು ಕರೆಯುತ್ತೇವೆ. ಅವರುಗಳು ರೆಗ್ಯುಲರ್ ಆಗಿ ಎಲೆಕ್ಟ್ರೊಸನ್ನು ಉಪಯೋಗಿಸಿ ಸರ್ವೆ ಮಾಡುವುದಿಲ್ಲ. ಅವರು ಜೀಪಿನಿಂದ ಕೆಳಗೆ ಇಳಿಯುವುದೇ ಇಲ್ಲ. ಸುಮ್ಮನೆ ಕಂಪಾಸನ್ನು ಇಟ್ಟುಕೊಂಡು ಒಂದು ಕಡೆ ಕಲ್ಲನ್ನು ಇಟ್ಟು ಇದೇ ಪಾಯಿಂಟ್ ಎಂದು ಹೇಳಿ ಹೊರಟು ಹೋಗುತ್ತಾರೆ. ಎಷ್ಟೇ ತಾಕೀತು ಮಾಡಿದರೂ ಸಹ ಅವರಿಂದ ಆ ಕೆಲಸ ಆಗುತ್ತಿಲ್ಲ. ಇದು ನನ್ನ ಗಮನಕ್ಕೆ ಬಂದಿರುವುದು, ಇದನ್ನು ಹೇಳುತ್ತಾ ಇದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಅಂತರ್ಜಲದ ಮಟ್ಟ ಕಡಿಮೆ ಇದ್ದಕಡೆ ಏನು ಮಾಡಿದರೂ ಸಹ ನೀರು ಬರುವುದಿಲ್ಲ. ಆ ರೀತಿ ನೀರಿನ ಮಟ್ಟವು ಕಡಿಮೆ ಇದ್ದಾಗ ಎಲ್ಲೂ ಕೂಡ ಬೋರ್‌ವೆಲ್ ಹಾಕಿದಾಗ ನೀರು ಸಿಗುವುದು ಕಷ್ಟ ಎಂಬ ಕಾಮನ್‌ಸೆನ್ಸ್ ಗೊತ್ತಿರುವಾಗ ನಾವು ಇದು ತಪ್ಪು, ಅದು ತಪ್ಪು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಬೋರ್‌ವೆಲ್‌ನಿಂದ ನೀರು ಸಿಗದಿದ್ದರೆ ಬೇರೆ ಕಡೆಯಿಂದ ನೀರನ್ನು ತರುವ ಬಗ್ಗೆ ಚಿಂತಿಸಬೇಕು. ಅದು ಸಹ ಕೋಲಾರದಲ್ಲಿ ಕಷ್ಟವಾಗಿದೆ. ಆದ್ದರಿಂದ ಕೆರೆಗಳ ಹೂಳನ್ನು ತೆಗೆಯುವ ಕೆಲಸವನ್ನು ಯುದ್ಧೋಪಾದಿಯಲ್ಲಿ ಮಾಡಬೇಕೆಂದು ಹೇಳಬಯಸುತ್ತೇನೆ. ಇದರಲ್ಲಿ ನನಗೆ ಅನುಭವವಾಗಿದೆ. ಸ್ವಲ್ಪ ನೀರನ್ನು ನಿಲ್ಲಿಸಿಬಿಟ್ಟರೆ

ಆ ಬಾವಿಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಈಗ ನನ್ನ ಕ್ಷೇತ್ರವಾದ ಸಂಡೂರಿನಲ್ಲಿ ಸಹ ನೀರಿನ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಆದ್ದರಿಂದ ನಾವು ಎಲ್ಲೆಲ್ಲಿ ಕೆರೆ ಮಾಡುತ್ತೇವೆ, ನೀರನ್ನು ನಿಲ್ಲಿಸುತ್ತೇವೆ ತಕ್ಷಣವೆ ಆ ಕೆರೆಗಳ ಕೆಳಗಡೆ ಎಲ್ಲಾ ಬಾವಿಗಳಲ್ಲಿ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಇದೊಂದೇ ಇದಕ್ಕೆ ಇರುವ ಪರಿಹಾರ.

ತಾಲ್ಲೂಕು ಪಂಚಾಯತಿ ನಿರ್ಣಯಗಳು

109 - ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಂಚಾಯತಿ ಕಾರ್ಯನಿರ್ವಹಣ ಅಧಿಕಾರಿಯು ತಾಲ್ಲೂಕು ಪಂಚಾಯಿತಿಗಳು ಮಾಡಿದ ನಿರ್ಣಯವನ್ನು ಉಲ್ಲಂಘಿಸಬಹುದೆ?*

ಆ) *ಉಲ್ಲಂಘಿಸಿದಲ್ಲಿ ಅಂತಹವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಇಲ್ಲ. ಆದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 156 (2) ಮತ್ತು (3)ರನ್ವಯ, ತಾಲ್ಲೂಕು ಪಂಚಾಯತಿಗಳ ನಿರ್ಣಯಗಳು ಕಾನೂನಿನ ಉಪಬಂಧಗಳ ಉಲ್ಲಂಘನೆ ಅಥವಾ ಅಸಂಗತವಾಗಿದ್ದಲ್ಲಿ, ಅಂತಹ ನಿರ್ಣಯಗಳನ್ನು ತಾಲ್ಲೂಕು ಪಂಚಾಯತಿಯ ಗಮನಕ್ಕೆ ತರುವುದು. ಆದರೂ ತಾಲ್ಲೂಕು ಪಂಚಾಯತಿ ಸದರಿ ಅಸಂಗತತೆಯನ್ನು ಪರಿಹರಿಸದಿದ್ದಲ್ಲಿ, ಕಾರ್ಯನಿರ್ವಹಣ ಅಧಿಕಾರಿ ಸದರಿ ನಿರ್ಣಯದ ಪ್ರತಿಯನ್ನು ತನ್ನ ಲಿಖಿತ ಟಿಪ್ಪಣಿಯೊಂದಿಗೆ ಅಧ್ಯಕ್ಷನಿಗೆ ತಿಳಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸುವುದು ಆತನ ಕರ್ತವ್ಯವಾಗಿರುತ್ತದೆ.

ಆ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀ ಎ. ಮಂಜು : ಮಾನ್ಯ ಅಧ್ಯಕ್ಷರೆ, ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿಯು ತಾಲ್ಲೂಕು ಪಂಚಾಯಿತಿಗಳು ಮಾಡಿದ ನಿರ್ಣಯವನ್ನು ಉಲ್ಲಂಘನೆ ಮಾಡಬಹುದೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಸಮಂಜಸವಾಗಿಲ್ಲ. ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಕಳೆದ ಜನವರಿ ತಿಂಗಳಿನಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಒಂದು ನಿರ್ಣಯವಾಯಿತು. ಆದು ಏನೆಂದರೆ ವಡ್ಡರಳ್ಳಿ ಎಂಬ ಗ್ರಾಮದಲ್ಲಿರುವ ಶಂಕುಚಕ್ರ ಯುವಕೆ ಸಂಘವನ್ನು ರಿನ್ಯುವಲ್ ಮಾಡಬೇಕೆಂದು ಪಂಚಾಯಿತಿಯಲ್ಲಿ ನಿರ್ಣಯವಾಯಿತು. ಆ ನಿರ್ಣಯವನ್ನು ಕಾರ್ಯನಿರ್ವಾಹಣಾಧಿಕಾರಿಯವರು ಏತಕ್ಕೆ ಉಲ್ಲಂಘನೆ ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು. ತಾಲ್ಲೂಕು ಪಂಚಾಯಿತಿ ಮಾಡಿದ ನಿರ್ಣಯವನ್ನು ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿ ಏತಕ್ಕೆ ಕಾರ್ಯಗತ ಮಾಡಿಲ್ಲ, ಅದಕ್ಕೆ ಕಾರಣವೇನು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.